1.40 ಪಿ.ಎಂ.

ಇದಕ್ಕೆ ಒಂದು ವೈಜ್ಞಾನಿಕವಾದಂಥ ಆಧಾರ ಇದೆ. ಈ ಮಂಡಳಿಗೆ ಒಂದು ತಾಲ್ಲೂಕನ್ನು ಸೇರಿಸತಕ್ಕಂಥದ್ದು. ಅಥವಾ ಬಿಡತಕ್ಕಂಥದ್ದು ಮಾಡಬೇಕಾದರೆ, ಅಧಿನಿಯಮಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಒಂದು ವೈಜ್ಞಾನಿಕವಾದಂಥ ಆಧಾರದ ಮೇಲೆ ಈ ಮಂಡಲಿಗೆ ತಾಲ್ಲೂಕುಗಳನ್ನು ಸೇರಿಸತಕ್ಕಂಥ ನಿರ್ಧಾರ ಈ ಹಿಂದೆ ಆಗಿರುವಾಗ ಈ ಸಂದರ್ಭದಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

(೫) ಬಿಜಾಪುರ ಜಿಲ್ಲೆಯಲ್ಲಿ ಗೌರವ ಶಿಕ್ಷಕರ ನೇಮಕಾತಿಯಲ್ಲಿ ತಪ್ಪು-ತಡೆ

ಶ್ರೀ ಶಿವಾನಂದ ಎಸ್. ಪಾಟೀಲ್ (ಟಿಕೋಟಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯಲ್ಲಿ ಗೌರವ ಶಿಕ್ಷಕರ ನೇಮಕಾತಿಯಲ್ಲಿ ಆದಂಥ ತಪ್ಪು ತಡೆಗಳ ಬಗ್ಗೆ ಸರ್ಕಾರದ ಗಮನ ಸೆಳೆದು ಇದಕ್ಕೆ ಒಂದು ಪರಿಹಾರವನ್ನು ಮಾನ್ಯ ಮುಖ್ಯಮಂತ್ರಿಗಳು ಒದಗಿಸಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಡೀ ಜಿಲ್ಲೆಯ ಎಲ್ಲಾ ಶಾಸಕರುಗಳು ಕೂಡ ಇದನ್ನು ಒತ್ತಾಯ ಮಾಡಿದ್ದೇವೆ. ರಾಜ್ಯದಲ್ಲಿ ಮೊದಲು ಗೌರವ ಶಿಕ್ಷಕರಿಗೆ ಕೃಪಾಂಕ ಕೊಟ್ಟು, ಅವರನ್ನು ನೇಮಕಾತಿ ಮಾಡಿಕೊಳ್ಳಬೇಕೆಂದು ಹೇಳಿ ಆದೇಶ ಹೊರಡಿಸಲಾಗಿತ್ತು. ಬಿಜಾಪುರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತನವರು ಸ್ವಲ್ಪ ತಪ್ಪು ಮಾಡಿರುವುದರಿಂದ, ಅದನ್ನು ಪುನಃ ನಾವು ಸರ್ಕಾರದ ಗಮನಕ್ಕೆ ತಂದು ಅದಕ್ಕೆ ತಿದ್ದುಪಡಿಯನ್ನು ಮಾಡಿಸಿ ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸಲಾಯಿತು. ಆ ಆದೇಶ ಬಂದ ನಂತರ 2-9-1996ಕ್ಕೆ ಗೆಜೆಟ್‌ನಲ್ಲಿ ಬಂದ ಮೇಲೆ 25-9-1996ಕ್ಕೆ ಸರ್ಕಾರ, 109 ಜನ ಗೌರವ ಶಿಕ್ಷಕರೆಂದು ಹೇಳಿ ನೇಮಕಾತಿಯ ತಾತ್ಕಾಲಿಕ ಪಟ್ಟಿಯನ್ನು ಅಲ್ಲಿನ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊರಡಿಸಿದರು. ಇದಾದ ನಂತರ ಇನ್ನು ಸ್ವಲ್ಪ ದಿವಸದಲ್ಲಿಯೇ ಸರ್ಕಾರದ ಆದೇಶವನ್ನೇ ಕೊಡಬೇಕಾದಂಥ ಪರಿಸ್ಥಿತಿ ಇದ್ದಾಗ, ಅಲ್ಲಿ ಜಿಲ್ಲಾಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ವರ್ಗಾವಣೆ ಆದಮೇಲೆ, ಅಲ್ಲಿಯ ಜಿಲ್ಲಾಧಿಕಾರಿಗಳು ಇನಚಾರ್ಜ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳಾದಮೇಲೆ -101 ಶಿಕ್ಷಕರು ಯಾರು ಸಹ ಗೌರವ ಶಿಕ್ಷಕರು ಅಲ್ಲವೆಂದು ಹೇಳಿ ಆ ನೇಮಕಾತಿಯನ್ನು ಕ್ಯಾನ್ಸಲ ಮಾಡಿದರು. ಅದು ಆದ ನಂತರ ಪುನಃ ನಾವು ಎಲ್ಲ ಶಾಸಕರು ಬಂದು ಸರ್ಕಾರವನ್ನು ಕೇಳಿಕೊಂಡಾಗ, ಮಾನ್ಯ ಶಿಕ್ಷಣ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಒಂದು ಪರಿಶೀಲನೆ ಟೀಂನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಪರಿಶೀಲನೆ ಟೀಂನವರು ಪರಿಶೀಲನೆ ಮಾಡಿದ ಮೇಲೆ ಏನು ಹೇಳಿದರೆಂದರೆ -ಜಿಲ್ಲಾಧಿಕಾರಿಗಳು ಮಾಡಿರುವುದು ತಪ್ಪಾಗಿದೆ, ಇದರಲ್ಲಿ ಕನಿಷ್ಟ 20ರಿಂದ 25 ಜನ ಗೌರವ ಶಿಕ್ಷಕರು ಇದ್ದಾರೆಂದು ತಿಳಿದುಕೊಂಡು ಅವರನ್ನು ನೇಮಕಾತಿ ಮಾಡಲಿಕ್ಕೆ ಆದೇಶವನ್ನು ಹೊರಡಿಸಿದ್ದಾರೆ. ಆದರೆ ಇವತ್ತು ಶಾಸಕರ ಸಮಸ್ಯೆ ಏನಾಗಿದೆಯೆಂದರೆ, ಅಲ್ಲಿ ಗೌರವ ಶಿಕ್ಷಕರೆಂದು ಸೇವೆ ಸಲ್ಲಿಸುತ್ತಿರುವವರು 1988ರಿಂದ ಕನಿಷ್ಟ 7 ರಿಂದ 10 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಈ ಗೌರವ ಶಿಕ್ಷಕರು ಪ್ರತಿಯೊಂದು ಭಾಗದಲ್ಲಿಯೂ ಇದ್ದಾರೆ. 101 ಜನ ಗೌರವ ಶಿಕ್ಷಕರು ಇದ್ದಾರೆಂದು ಹಿಂದಿನ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳು ಹೇಳಿದರು

ಸಹ ಒಬ್ಬ ಜಿಲ್ಲಾಧಿಕಾರಿಯವರು ಬಂದು ಗೌರವ ಶಿಕ್ಷಕರು ಯಾರೂ ಇಲ್ಲವೆಂದು ಹೇಳಿದರು. ಆದರೆ ಸರ್ಕಾರದ ಟೀಂ ಬಂದು 25 ಜನ ಗೌರವ ಶಿಕ್ಷಕರು ಇದ್ದಾರೆಂದು ಹೇಳಿದರು. ಆದ್ದರಿಂದ ಇವತ್ತು ನಮ್ಮ ಎಲ್ಲಾ ಶಾಸಕರು ಒತ್ತಾಯ ಮತ್ತು ವಿನಂತಿ ಮಾಡಿಕೊಳ್ಳುವುದೇನೆಂದರೆ, 101 ಜನ ಗೌರವ ಶಿಕ್ಷಕರು ತಾತ್ಕಾಲಿಕವಾಗಿ, ತಾತ್ವಿಕವಾಗಿ ಆಲ್ಲಿ ಇದ್ದದ್ದು ಸರಿ. ಅವರನ್ನು ನೇಮಕಾತಿ ಮಾಡುವುದರಲ್ಲಿ ಏನೋ ಸ್ವಲ್ಪ ಲೋಪದೋಷಗಳು ಆಗಿವೆ. ಅದನ್ನು ಪುನಃ ಪರಿಶೀಲನೆ ಮಾಡಿ ತಾವು ಏನು ಪ್ರಕಟನೆ ಮಾಡತಕ್ಕಂಥ ಲಿಸ್ಟ ಇದೆ ಅದನ್ನು ತಡೆಹಿಡಿದು, ಇದು ಎಲ್ಲಾ ಶಿಕ್ಷಕರ ಒತ್ತಾಯ ಇದೆ. ಇದು ಯಾವುದೇ ಒಂದು ಪಕ್ಷ ಅಥವಾ ಯಾವುದೇ ಒಂದು ಜಿಲ್ಲೆಯನ್ನು ಇಟ್ಟುಕೊಂಡು ನಾವು ಮಾತಾಡುತ್ತಿಲ್ಲ. ಸಾಮೂಹಿಕವಾಗಿ ಎಲ್ಲಾ ಶಾಸಕರು ಇದನ್ನು ಒತ್ತಾಯ ಮಾಡುತ್ತಿದ್ದೇವೆ. ಏನು ಆಲ್ಲಿ ತಪ್ಪು ತಡೆ ಆಗಿದೆ ಅದನ್ನು ಪುನಃ ಪರಿಶೀಲನೆ ಮಾಡಿ 101 ಜನ ಗೌರವ ಶಿಕ್ಷಕರಿಗೆ ಸಂಪೂರ್ಣವಾದ ಅವಕಾಶ ಕೊಡತಕ್ಕಂಥದ್ದಕ್ಕೆ ಸರ್ಕಾರ ಮನವೊಲಿಸಿ ಇದನ್ನು ಮಾಡಿಕೊಡಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ ಕಳೆದ 3-4 ವರ್ಷಗಳಿಂದ ಅತ್ಯಂತ ಆಶಿಕ್ಷಿತ ರೀತಿಯಲ್ಲಿ ಆಗಿದೆ. ಯಾರ್ಯಾರಿಗೆ ಏನು ತಿಳಿಯುತ್ತದೆಯೋ ಮನಸ್ಸಿಗೆ ಬಂದ ಹಾಗೆ ಮಾಡುತ್ತಾರೆ. ಜಿಲ್ಲಾ ಪಂಚಾಯತನವರು ರೆಕಮೆಂಡ ಮಾಡಿದ್ದನ್ನು ಇವರು ಕನಫರ್ಮ ಮಾಡುವುದಿಲ್ಲ. Utter confusion in the entire thing. ಅದಕ್ಕೋಸ್ಕರ, ಶಿಕ್ಷಣ ಮಂತ್ರಿಗಳು ಬಂದ ಮೇಲೆ, ಅದು ಕೇವಲ ಬಿಜಾಪುರ ಜಿಲ್ಲೆ ಅಲ್ಲ, ಅರೆಕಾಲಿಕ ಶಿಕ್ಷಕರು ಮತ್ತು ಅನುದಾನರಹಿತ ಸಂಸ್ಥೆಗಳ ಶಿಕ್ಷಕರುಗಳ ಸಮಸ್ಯೆಗಳು ಇವೆ, ಅದಕ್ಕೆ ಏನಾದರೂ ಒಂದು ವೈಜ್ಞಾನಿಕ ಆಧಾರ ಇಟ್ಟುಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ಒಂದು ಜಿಲ್ಲೆಯವರು, ಕೊನೆಗೆ ಒಂದು ವಿಭಾಗದವರು ಹೈದರಾಬಾದ್ ಕರ್ನಾಟಕದವರು ಎನ್ನುವ ಪ್ರಶ್ನೆ ಅಲ್ಲ. ಇದು ಬಹಳ ಗಂಭೀರವಾದ ಸಮಸ್ಯೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಾನು ವಿದ್ಯಾಮಂತ್ರಿಗಳನ್ನು ಕರೆಯಿಸಿ ಮತ್ತು ಅದಕ್ಕೆ ಸಂಬಂಧಪಟ್ಟವರನ್ನು ಕರೆಯಿಸಿ, ಅದಕ್ಕೆ ಫೈನಲ್ಲಾಗಿ ಏನಾದರೂ ಉತ್ತರ ಕೊಡಬೇಕಾಗುತ್ತದೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಗೌರವ ಶಿಕ್ಷಕರೆಂದು ಸುಮಾರು 250 ಜನ ಇಲ್ಲಿ ಕೆಲಸ ಮಾಡಿದ್ದಾರೆ. ಅದರಲ್ಲಿ ಕೆಲವು ಜನರಿಗೆ ಖಾಯಂ ಆಗಿದೆ. ಕೆಲವು ಜನರನ್ನು ಬಿಟ್ಟುಬಿಟ್ಟಿದ್ದಾರೆ. ಏಕೆಂದರೆ ಅವರು ಆ ದಿವಸ ಗೈರುಹಾಜರಿ ಇದ್ದಿರಬಹುದು ಬಿಟ್ಟುಬಿಟ್ಟಿದ್ದಾರೆ. ಏಕೆಂದರೆ ಅವರು ಆ ದಿವಸ ಗೈರುಹಾಜರಿ ಇದ್ದಿರಬಹುದು ಅಥವಾ ಪರಿಶೀಲನೆಯಲ್ಲಿ ಅವರು ಹೆಸರು ಬರಲಿಲ್ಲವೆಂದು ಕೆಲವರನ್ನು ಬಿಟ್ಟುಬಿಟ್ಟಿದ್ದಾರೆ. ಅವರನ್ನು ಖಾಯಂ ಮಾಡಲಿಲ್ಲ. ಉಳಿದವರನ್ನು ಖಾಯಂ ಮಾಡಿದ್ದಾರೆ ಎನ್ನತಕ್ಕಂಥದ್ದು ಮಾನ್ಯ ಸದಸ್ಯರ ಹೇಳಿಕೆ. ಈಗ ಎನಕ್ವೈರಿ ಮಾಡಿದಾಗ These teachers were appointed by the Zilla Panchayat. ಅವರು ಏನು ಮಾಡಿದರು ಎಂದರೆ ಗೌರವ ಶಿಕ್ಷಕರು ಎಂದು ನೇಮಕ ಮಾಡಿಕೊಂಡಿದ್ದರು. ನಿಮ್ಮ ಸರ್ಕಾರದ

ಎಕಾನಮಿ ಆದೇಶ ಇದ್ದ ಸಂದರ್ಭದಲ್ಲಿ ಜಿಲ್ಲಾಪರಿಷತ್‌ನವರು ಸ್ಕೂಲುಗಳನ್ನು ನಡೆಸುವುದಕ್ಕೆ ಹಣವಿಲ್ಲವೆಂದು ಹೇಳಿ, 100-200 ರೂಪಾಯಿ ಗೌರವಧನ ಕೊಟ್ಟು ಗೌರವ ಶಿಕ್ಷಕರೆಂದು ಹೇಳಿ ಶಾಲೆಗಳಲ್ಲಿ ಕೆಲಸ ನಡೆಸುವುದಕ್ಕೆ, ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಪ್ರಾರಂಭ ಮಾಡಿದರು. ಕೊನೆಗೆ ಆ ಶಿಕ್ಷಕರಿಗೆ ಐದಾರು ವರ್ಷ ಸೇವೆ ಮಾಡಿದಮೇಲೆ, ಅವರು ಅರ್ಜಿ ಕೊಟ್ಟ ಮೇಲೆ, ಇಲ್ಲಿ ಕೆಲವು ಜನರಿಗೆ ಸರ್ಕಾರ ಕನಫರ್ಮ ಮಾಡಿತು. ಕೆಲವು ಜನ ಬಿಟ್ಟು ಹೋದವರು ಈಗ ಪುನಃ ಅವರು ಏನು ಅರ್ಜಿ ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್ತಿನಿಂದ ಏನು ರಿಪೋರ್ಟ್ ಬಂದಿದೆಯೆಂದರೆ ಡೆಪ್ಯೂಟಿ ಕಮಿಷನರ್ ರವರು, ಅಲ್ಲಿ ಯಾರು ಇಲ್ಲ ಎಲ್ಲರಿಗೂ ಕನಫರ್ಮ ಮಾಡಿದ್ದೇವೆಂದು ಹೇಳಿದ್ದಾರೆ. ಚೀಫ್ ಸೆಕ್ರೆಟರಿಯವರು - ಇನ್ನು ಅದರಲ್ಲ 20-30 ಜನ ಉಳಿದಿದ್ದಾರೆ ಅವರಿಗೆ ಕನಫರ್ಮ ಮಾಡಿ ಎಂದು ಹೇಳುತ್ತಿದ್ದಾರೆ. ಈ ವ್ಯತ್ಯಾಸ ಇದ್ದ ಕಾರಣ ಸಮಗ್ರವಾದ ವರದಿಯನ್ನು ತರಿಸಿಕೊಂಡು ಉಳಿದಂಥ ಜನರನ್ನು ಕೂಡ ಕನ್‌ಫರ್ಮ್ ಮಾಡಿ ಎಂದು ಹೇಳುತ್ತಿದ್ದಾರೆ. ಈ ವ್ಯತ್ಯಾಸ ಇದ್ದ ಕಾರಣ ಸಮಗ್ರವಾದ ವರದಿಯನ್ನು ತರಿಸಿಕೊಂಡು ಉಳಿದಂಥ ಜನರನ್ನು ಕೂಡ ಕನಫರ್ಮ ಮಾಡಿ ಎನ್ನತಕ್ಕಂಥದ್ದು ಅವರ ಬೇಡಿಕೆಯಾಗಿದೆ.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ ಅವರು ಅಲಂಕರಿಸಿದರು.)

ಶ್ರೀ ಜೆ.ಹೆಚ್. ಪಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈ ಸಮಸ್ಯೆ ಯಾವುದೋ ಒಂದು ಹಂತದಲ್ಲಿ ಆಗಿಲ್ಲ. ಕೆಲವರನ್ನು ನೇಮಕಾತಿಯಲ್ಲಿ ಏಕೆ ಬಿಟ್ಟಿದ್ದಾರೆ? ಗೌರವ ಶಿಕ್ಷಕರೆಂದು ಹೇಳುವವರು ಆ ಸಮಯದಲ್ಲಿ ಇದ್ದರೋ ಇಲ್ಲವೋ ಎನ್ನುವುದನ್ನೆಲ್ಲ ಒಂದು ಫೈನಲ್ ಆಗಿ ನೋಡಿಕೊಂಡು..

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಇದು ಏನಾಗಿದೆಯೆಂದರೆ, ತಾತ್ಕಾಲಿಕ ಪಟ್ಟಿವೆಂದು ಏನು ಮಾಡಿದ್ದಾರೆ ಅದರಲ್ಲಿ ನೇಮಕ ಮಾಡುವಾಗ ಅವರಿಗೆ ಕೃಪಾಂಕವನ್ನು ಕೊಟ್ಟಿದ್ದಾರೆ. ಅದೇ ರೀತಿ ಈಗ ಉಳಿದವರಿಗೆ ನೀವು, A.E.O. ರವರು ಮತ್ತು ಗ್ರಾಮಪಂಚಾಯತಿ ಕಾರ್ಯದರ್ಶಿಯವರು ಏನು ಇದ್ದಾರೆ ಅವರು ಕೊಟ್ಟಿರತಕ್ಕಂಥ ದೃಢೀಕರಣ ಪತ್ರವನ್ನು ನೋಡಿ ಇವರನ್ನು...

ಶ್ರೀ ಜೆ.ಹೆಚ್. ಪಟೀಲ : ನಾನು, ಶಿಕ್ಷಕರು ತಪ್ಪು ಮಾಡಿದ್ದಾರೆಂದು ಹೇಳುವುದಿಲ್ಲ. ಯಾವ ಯಾವ ಹಂತದಲ್ಲಿ ಯಾವ ಯಾವ ಅಧಿಕಾರಿಗಳು ತಮ್ಮ ಅಧಿಕಾರಿಯಲ್ಲಿ ತಪ್ಪು ಮಾಡಿದ್ದಾರೆ, ಮತ್ತು ಅದರೊಳಗೆ ಯಾರ್ಯಾರನ್ನು ಸಕ್ರಮಗೊಳಿಸಲಾಗಿದೆ, ಸಕ್ರಮ ಗೊಳಿಸುವುದಕ್ಕೆ ಒಳಪಡದೆ ಇರುವವರು ಯಾರ್ಯಾರು, ಇದಕ್ಕೆ ಸ್ವಲ್ಪ Let's see what we can do. ಅದಕ್ಕೆ ಶಿಕ್ಷಣ ಮಂತ್ರಿಗಳು ಬಂದಮೇಲೆ ಈ ಬಿಜಾಪುರ ಜಿಲ್ಲೆಯಲ್ಲಿ ಆಗಿರತಕ್ಕಂಥ ಲೋಪದೋಷ ಏನು ಇದೆ ಅದನ್ನು ಸರಿಪಡಿಸುವುದಕ್ಕೆ ಹೇಳುತ್ತೇನೆ.

ಮಾನ್ಯ ಸದಸ್ಯರೊಬ್ಬರು : ಬಿಜಾಪುರ ಜಿಲ್ಲೆಗೆ ಒಂದು ಕಾಯಿದೆ, ಬೇರೆ ಅಲ್ಲಿಗೆ ಇನ್ನೊಂದು ಕಾಯಿದೆ ಇರಬಾರದು. ಎಲ್ಲಾ ಜಿಲ್ಲೆಗೂ ಒಂದು ನಿಯಮ ಇರಬೇಕು.

ಉಪಾಧ್ಯಕ್ಷರು : ಶಿಕ್ಷಣ ಮಂತ್ರಿಗಳ ಜೊತೆಗೆ ಇದರ ಬಗ್ಗೆ ಮಾತನಾಡುತ್ತೇನೆಂದು ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್ : ಎಲ್ಲಾ ಜಿಲ್ಲೆಗಳಿಗೂ ಒಂದೇ ಕಾನೂನು. ಬಿಜಾಪುರ ಜಿಲ್ಲೆಗೆ ಬೇರೆ ಕಾನೂನು ಮಾಡುವುದಕ್ಕಾಗುವುದಿಲ್ಲ. ನೀವು ಕೇಳಿದರೂ ಮಾಡುವುದಕ್ಕಾಗುವುದಿಲ್ಲ.

(ಅಂ) ರಾಜ್ಯದಲ್ಲಿ ರಸ್ತೆ ಅಪಘಾತ ಕುರಿತು

ಶ್ರೀ ಪಾಟಾಳ ನಾಗರಾಜ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ತುಮಕೂರು ರಸ್ತೆ, ಮೈಸೂರು ರಸ್ತೆ, ಮದರಾಸು, ರಸ್ತೆ ದೇವನಹಳ್ಳಿ ರಸ್ತೆಗಳಲ್ಲಿ ಪ್ರತಿನಿತ್ಯ ಅಪಘಾತ ಆಗುತ್ತಿರುತ್ತವೆ. ಈ ರಸ್ತೆಗಳು ಒಂದು ರೀತಿಯಲ್ಲಿ ಯಮಲೋಕಗಳು ಆಗಿವೆ. ಒಂದು ಕಾಲದಲ್ಲಿ ಈ ರಸ್ತೆಗಳಲ್ಲಿ ಬಹಳ ಕಡಿಮೆ ವಾಹನಗಳು ಓಡಾಡುತ್ತಿದ್ದವು. ಈಗ ವಾಹನಗಳು ವಿಪರೀತವಾಗಿ ಓಡಾಡುವುದರಿಂದ ತೊಂದರೆಯಾಗಿದೆ. ಬೆಂಗಳೂರು ನಗರದ ರಸ್ತೆಗಳಲ್ಲಿ ಬೇಗ ಹೋಗಬೇಕೆಂದರೆ ಸಾಧ್ಯವಾಗುವುದಿಲ್ಲ. ಒಂದೊಂದು ವೃತ್ತವನ್ನು ದಾಟಬೇಕಾದರೆ 10-20 ನಿಮಿಷ ನಿಲ್ಲಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಕನಿಷ್ಟ ಪ್ರತಿ ದಿನಕ್ಕೆ 10 ಲಕ್ಷ ವಾಹನಗಳು ಓಡಾಡುತ್ತಿವೆ. ಒಂದು ಕಡೆ ಪರಿಸರ ನಾಶವಾಗುತ್ತಿದೆ. ಮತ್ತೊಂದು ಕಡೆ ಅಪಘಾತಗಳು ಆಗುತ್ತಿವೆ. ರಾಜಾಜಿನಗರದಿಂದ ವಿಧಾನಸೌಧಕ್ಕೆ ಬರಬೇಕಾದರೆ, ಅಥವಾ ಬೇರೆ ಬೇರೆ ಕಡೆಯಿಂದ ವಿಧಾನ ಸೌಧಕ್ಕೆ ಬರಬೇಕಾದರೆ ಗಂಟೆಗಟ್ಟಲೆ ಸಮಯ ಬೇಕಾಗುತ್ತದೆ. ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಮತ್ತು ಅಪಘಾತಗಳನ್ನು ತಪ್ಪಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ. ಈಗ ಸರ್ಕಾರದವರು ಏನು ಮಾಡುತ್ತಿದೆಯೆಂದರೆ -ಬೆಂಗಳೂರು ನಗರದಲ್ಲಿ ಒಂದು ಕಡೆ ಮೇಲುಸೇತುವೆ ಮಾಡುತ್ತಿದ್ದಾರೆ, ಮತ್ತೊಂದು ಗಡೆ ಲಘು ರೈಲ್ವೆ ಯೋಜನೆ ತರುತ್ತಿದ್ದಾರೆ, ಇನ್ನೊಂದು ಕಡೆ ವೃತ್ತ ರೈಲ್ವೆ ಬರುತ್ತದೆಂದು ಹೇಳುತ್ತಾರೆ, ನಂತರ ಬೆಂಗಳೂರಿನ ಹೊರಗಡೆ ಹೊರವಲಯ ರಸ್ತೆ ಎಂದು ಮಾಡುತ್ತಿದ್ದೇವೆಂದು ಹೇಳುತ್ತಾರೆ, ಒಂದು ದಿವಸ ಲಾರಿಗಳನ್ನು ಹಗಲು ಹೊತ್ತಿನಲ್ಲಿ ಓಡಿಸುವುದಕ್ಕೆ ನಿಲ್ಲಿಸುತ್ತೇವೆಂದು ಹೇಳುತ್ತಾರೆ, ಸ್ಟ್ರೈಕ್ ಮಾಡಿದ ತಕ್ಷಣ ಲಾರಿಗಳನ್ನು ಬಿಡಿ ಒಂದು ಹೇಳುತ್ತಾರೆ, ಇದನ್ನೆಲ್ಲ ನೋಡಿದಾಗ, ಈ ಒಂದು ತಿಂಗಳಿನಲ್ಲಿ ಸುಮಾರು 30 ಜನ ಸತ್ತಿದ್ದಾರೆ. 22ನೇ ತಾರೀಖು ತುಮಕೂರು ರಸ್ತೆಯಲ್ಲಿ ಅಪಘಾತವಾಗಿ 16 ಜನ ಸತ್ತಿದ್ದಾರೆ. ಮೊನ್ನೆ ದೇವನಹಳ್ಳಿಯಲ್ಲಿ ನಮ್ಮ ಮಾಜಿ ಲೋಕಸಭಾ ಸದಸ್ಯರ ಅಳಿಯನ ಹೆಂಡತಿ ಸೇರಿದಂತೆ ಅನೇಕ ಜನ ಸತ್ತಿದ್ದಾರೆ. ಹೊಸಕೋಟೆ ರಸ್ತೆಯಲ್ಲಿ, ಮೈಸೂರು ರಸ್ತೆಯಲ್ಲಿ ಹೀಗೆ ಸರಾಸರಿ ತಿಂಗಳಿಗೆ ಕನಿಷ್ಟ 100 ಜನ ಸಾಯುತ್ತಿದ್ದಾರೆ, ಅದರ ಬಗ್ಗೆ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದ ನಿರ್ಧಾರವೇನು ? ಒಂದು ಕಡೆ ಮೈಸೂರು ರಸ್ತೆಯಲ್ಲಿ ಮೇಲು ಸೇತುವೆ ಪ್ರಾರಂಭವಾಗಿದೆ. ಇದರ ಮಧ್ಯೆ ಲಘು ರೈಲ್ವೆ ತರುತ್ತೇವೆಂದು ಇವರು ಹೇಳುತ್ತಿದ್ದಾರೆ. ಒಂದು ಕಡೆ ಮೇಲು ಸೇತುವೆ ಇನ್ನೊಂದು ಕಡೆ ಲಘು ರೈಲ್ವೆ, ಹೀಗಾದರೆ ನಾವು ಎಲ್ಲಿಗೆ ಹೋಗತಕ್ಕಂಥದ್ದು ? ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ. ಆದುದರಿಂದ ನಾನು ಹೇಳುವುದೇನೆಂದರೆ